
# ಯುವ ಶಕ್ತಿಯನ್ನು ಪ್ರವಹಿಸುವ ವೇದಾಂತ ವಿಧಾನ

ಸ್ವಾಮಿ ರಂಗನಾಥಾನಂದ

'ಉದ್ಧರೇದಾತ್ಮನಾತ್ಮಾನಂ' ಎಂಬ ಗೀತೆಯ ಮಾತಿನಂತೆ, ಮಾನವನು ತನ್ನಲ್ಲಿ ಅಡಗಿರುವ ಅನಂತ ಶಕ್ತಿಯನ್ನು ಕಾರ್ಯದಕ್ಷತೆ ಹಾಗೂ ವೇದಾಂತ ಜ್ಞಾನದ ಮೂಲಕ ವ್ಯಕ್ತಗೊಳಿಸುತ್ತಾ, ಸ್ವಾಮೀಜಿ ಹಾಕಿಕೊಟ್ಟ ಆದರ್ಶದಂತೆ ಮಾನವ ಸೇವೆಯನ್ನು ಮಾಡುವ ಅಗತ್ಯವನ್ನು ಪ್ರತಿಪಾದಿಸಿದವರು ರಾಮಕೃಷ್ಣ ಮಹಾಸಂಘದ ೧೩ನೇ ಪರಮಾಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು. ವಿಖ್ಯಾತ ವಾಗ್ಮಿಯೂ, ಲೇಖಕರೂ ಆಗಿದ್ದ ಅವರು ಹಲವು ಮಂದಿ ಆಧ್ಯಾತ್ಮಿಕ ಪಿಪಾಸುಗಳಿಗೆ ಗುರುವಾಗಿ ಮಾರ್ಗದರ್ಶನ ನೀಡಿದವರು. ಪೂಜ್ಯರ '**ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು**' ಗ್ರಂಥದ ೪ ನೇ ಸಂಪುಟದ 'ಯುವಜನ ಹಾಗೂ ಮಾನವನ ಭವಿಷ್ಯ' ಎಂಬ ಲೇಖನದ ಭಾಗವನ್ನಿಲ್ಲಿ ಯುವಕರಿಗಾಗಿ ನೀಡುತ್ತಿದ್ದೇವೆ. *(ಅನು: **ನೀಲತ್ತಹಳ್ಳಿ ಕಸ್ತೂರಿ**)*

ಶ್ರೀರಾಮಕೃಷ್ಣರು ಅನೇಕ ಶಿಷ್ಯರನ್ನು ಆಕರ್ಷಿಸುತ್ತಿದ್ದರು. ಅವರ ಪೈಕಿ ಸುಮಾರು ೧೫ ಮಂದಿ, ೧೪ ರಿಂದ ೨೧ ವಯಸ್ಸಿನ ಎಳೆಯ ವಿದ್ಯಾವಂತ ಹುಡುಗರು. ಅವರಿಗೆ ಮುಂದಾಳು ನರೇಂದ್ರನಾಥ, ಮುಂದೆ ಸ್ವಾಮಿ ವಿವೇಕಾನಂದರಾದವರು. ಈ ತಂಡದಲ್ಲಿ ಶ್ರೀರಾಮಕೃಷ್ಣರು ಆಧುನಿಕ ಜನತೆಗೆ ತಮ್ಮ ಸಂದೇಶವನ್ನು ಸಾರುವ ಅತ್ಯುತ್ತಮ ಮಾಧ್ಯಮವನ್ನು ಕಂಡುಕೊಂಡರು. ಆ ಕಾಲಕ್ಕೆ ನರೇಂದ್ರನಾಥ್ ೧೯ ಅಥವಾ ೨೦ರ ತರುಣ. ಅವರಲ್ಲಿ ಹಾಗೂ ಇತರ ಶಿಷ್ಯರಲ್ಲಿ ಶ್ರೀರಾಮಕೃಷ್ಣರು ಗುರುತಿಸಿದ ಅದ್ಭುತ ಶಕ್ತಿ ಏನು? ಈ ತರುಣ ಶಿಷ್ಯರು ತಮ್ಮ ಶಕ್ತಿಗಳನ್ನು ಪಟುಗೊಳಿಸಲು ಹಾಗೂ ಅವರನ್ನು ಗುಣದಲ್ಲಿ ಮತ್ತು ಪ್ರಮಾಣದಲ್ಲಿ ಉನ್ನತಗೊಳಿಸಲು, ಶ್ರೀರಾಮಕೃಷ್ಣರು ಸಹಾಯ ಮಾಡಿದರು. ಈ ಗುಣಾತ್ಮಕವಾದ ಲಾಭಕರವಾದ ಶಕ್ತಿಗಳು ಭಾರತದ ಹಾಗೂ ಪಶ್ಚಿಮದ ಇಂದಿನ ಇತಿಹಾಸದ ಮೇಲೆ ಹೇಗೆ ಸಿಡಿದು ಚೆಲ್ಲಿದವು ಎಂಬುದನ್ನು ನೆನೆಯುವುದು ನಮಗೆ ಒಳ್ಳೆಯದು. ಈ ಶಕ್ತಿಗಳು ಒಂದು ಹೊಸ ಚಳುವಳಿಯಾಗಿಯೇ ರೂಪುಗೊಂಡವು. ಅದೇ ರಾಮಕೃಷ್ಣ ಚಳುವಳಿ. ಯುವ ಸತ್ವ, ಉನ್ನತಾದರ್ಶ ಹಾಗೂ ಮಾನವಾಭಿವೃದ್ಧಿಗೆ ಆಚರಣೆಯ ಕಾರ್ಯಕ್ರಮಗಳಿಂದ ತುಂಬಿದ ಚಳುವಳಿ ಜಗತ್ತಿನ ಎಲ್ಲೆಡೆ ಮಾನವ ಶ್ರೇಷ್ಠತೆಯ ಮಹಾ ಅನ್ವೇಷಣೆಯಲ್ಲಿ ಭಾಗವಹಿಸಲು ಈ ಚಳುವಳಿಯನ್ನು ಸೇರುವಂತೆ, ಇದು ನೂರಾರು ಇತರ ಯುವಜನರನ್ನು ಆಕರ್ಷಿಸಿತು, ಈಗಲೂ ಆಕರ್ಷಿಸುತ್ತಿದೆ. ಇದು ಈಗಲೂ ಬಲವಾಗಿ ನಡೆಯುತ್ತಿದೆ ; ದಿನದಿಂದ ದಿನಕ್ಕೆ ಬಲಗೊಳ್ಳುತ್ತಿದೆ.

ಸಂಸ್ಕೃತಿ ಮತ್ತು ಪರಂಪರೆ ಕುರಿತಂತೆ ನಮ್ಮಲ್ಲಿರುವ ನಾನಾ ತಪ್ಪು ತಿಳಿವಳಿಕೆಗಳನ್ನು ನಾವು ತಿದ್ದಿಕೊಳ್ಳುವುದು ಒಳ್ಳೆಯದು. ಧರ್ಮ ಎಂದರೆ ಏನೋ ಮುದಿತನದಲ್ಲಿ, ಅದರಲ್ಲೂ ಮರಣ ಕಾಲದಲ್ಲಿ ಭಾವಿಸಬೇಕಾದುದು ಎಂಬುದೇ ನಮ್ಮ ಧರ್ಮ ಕಲ್ಪನೆ. ಆ ಸಮಯದಲ್ಲಿ ನಾವು ಧರ್ಮದಿಂದ ಬಯಸುವುದು ಒಂದನ್ನೇ — ಸ್ವರ್ಗಕ್ಕೆ ಟಿಕೆಟ್ಟು ! ನಾವು ಧರ್ಮ ವಿಜ್ಞಾನದ ಭಾವವನ್ನು ಅರ್ಥಮಾಡಿಕೊಳ್ಳಬೇಕು. ಬಾಳಿನಲ್ಲಿ ಸತ್ಯಕೇಂದ್ರಿತವಾದ ಅನ್ವೇಷಣೆಯ ಮೂಲಕ ಭೌತಿಕ, ಮಾನಸಿಕ ಹಾಗೂ ಆಧ್ಯಾತ್ಮಿಕವಾದ ಸರ್ವತೋಮುಖ ಪ್ರಗತಿಯೇ ಇದರ ಶಬ್ದಸೂತ್ರ. ಇದೇ ಯುವ ಶಕ್ತಿಗಳ ಶುದ್ಧ, ಹೆಚ್ಚು ಶುದ್ಧ ರೂಪಗಳನ್ನು ಪ್ರವಹಿಸುವ ವೇದಾಂತ ವಿಧಾನ.



ಸ್ವಾಮಿ ರಂಗನಾಥಾನಂದಜಿ ಮಹಾರಾಜ್

ಧರ್ಮದ ಆಶಯ ಇದೇ ಆದಲ್ಲಿ ನಮ್ಮಲ್ಲಿ ಯುವ ಸತ್ತ್ವ, ಶಕ್ತಿ ಇರುವಾಗಲೇ ಇದನ್ನು ಅರಸುವುದು ಅತ್ಯುತ್ತಮ. ಜಡವಾಗಿ, ಮುದಿಯಾಗಿ, ಜರ್ಝರಿತವಾದಾಗ ಅಲ್ಲ. ಇದು ಸ್ಪಷ್ಟ. ಉದಾಹರಣೆಗೆ ಪ್ರಕೃತಿಯ ಶಕ್ತಿಗಳನ್ನು ನಿಭಾಯಿಸುವಾಗ ನಾವು ಅಣೆಕಟ್ಟು ಯಾವಾಗ ಕಟ್ಟುತ್ತೇವೆ? ನದಿಯಲ್ಲಿ ನೀರು ಹರಿಯುತ್ತಿರುವಾಗ; ನೀರೇ ಹರಿಯುತ್ತಿಲ್ಲವಾದಾಗ, ಕಟ್ಟೆ ಕಟ್ಟುವುದರಲ್ಲಿ ಏನೂ ಅರ್ಥವಿಲ್ಲ. ನದಿಯಲ್ಲಿ ನೀರು ಹರಿಯುತ್ತಿರುವಾಗ ಮಾತ್ರವೇ, ನದಿಯ ನಿಯಂತ್ರಣದ ಕಾರ್ಯಕ್ರಮವೆಲ್ಲ ಸಾಧ್ಯ. ಅದೇ ರೀತಿ ನಮ್ಮಲ್ಲಿ ಯುವ ಶಕ್ತಿ ಇರುವಾಗ ಮಾತ್ರ ಅದನ್ನು ಸತ್ಯ ಶಿವ ಸುಂದರಗಳತ್ತ ಅಭಿಮುಖವಾಗಿಸಲು ಅದರ ತರಬೇತಿ, ಶಿಸ್ತುಗೊಳಿಸುವಿಕೆ, ಸಂಸ್ಕರಣ ಎಲ್ಲವೂ ಅರ್ಥಪೂರ್ಣವಾಗುತ್ತವೆ, ಫಲಪ್ರದವಾಗುತ್ತವೆ.

ಈ ಮಹದ್ವಿಚಾರವನ್ನು ತೈತ್ತಿರೀಯ ಉಪನಿಷತ್ತಿನ ಒಂದು ಶ್ಲೋಕದಲ್ಲಿ ಹೇಳಿರುವುದನ್ನು ನಾವು ಉಪನಿಷತ್ತುಗಳಲ್ಲಿ ಕಾಣುತ್ತೇವೆ. *(೨-೮).* ಸ್ವಾಮಿ ವಿವೇಕಾನಂದರು ಯುವ ಜನರ ಬಗ್ಗೆ ಹೇಳುವಾಗ, ಈ ಶ್ಲೋಕದ ಕೆಲವು ಶಬ್ದಗಳನ್ನು ಆಗಾಗ ಪ್ರಸ್ತಾಪಿಸುತಿದ್ದರು. ಅದರ ಹೆಸರು ಆನಂದಸ್ಯ ಮೀಮಾಂಸಾ — ಆನಂದದ ಸ್ವರೂಪ ಕುರಿತು ಜಿಜ್ಞಾಸೆ. ಅದು ಆರಂಭವಾಗುವುದು ಹೀಗೆ : **ಸೈಷಾ ಆನಂದಸ್ಯ ಮೀಮಾಂಸಾ ಭವತಿ.** 'ಆನಂದ ಸ್ವರೂಪದ ಬಗ್ಗೆ ವಿಚಾರ ಇಲ್ಲಿದೆ.' ಅನಂತರ ಉಪನಿಷತ್ತು ಆನಂದದ ಒಂದು ಘಟಕವನ್ನು ಗೊತ್ತುಮಾಡುತ್ತದೆ ; ಅದು ಆರಿಸಿಕೊಳ್ಳುವ ಆ ಘಟಕ ಯುವಾ ಸ್ಯಾತ್‌ನ ಆನಂದ. ನಿಜ

ವಾದ ಆನಂದ ಇರುವುದು ಯೌವನ ಇರುವಾಗ, ಶಕ್ತಿಪೂರ್ಣರಾಗಿ, ಸತ್ವಪೂರ್ಣರಾಗಿ, ಜೀವಪೂರ್ಣರಾಗಿ ಇರುವಾಗ. ಆದರೆ ಆ ಕಚ್ಚಾ ಯುವಶಕ್ತಿಯಿಂದಷ್ಟೆ ಉಪನಿಷತ್ತಿಗೆ ತೃಪ್ತಿಯಿಲ್ಲ: ಆದ್ದರಿಂದ ಆ ಆನಂದ ಘಟಕವನ್ನು ಭರ್ತಿ ಮಾಡಲು ಇನ್ನೂ ನಾಲ್ಕು ಷರತ್ತುಗಳನ್ನು ಸೇರಿಸುತ್ತದೆ. 'ಸಾಧು ಯುವಾ ಅಧ್ಯ-ಯಕಃ' ಆಶಿಷ್ಠೋ, ಧೃಢಿಷ್ಠೋ ಬಲಿಷ್ಠಃ — ಸುಶಿಕ್ಷಿತ, ಆಶಾಪೂರ್ಣ, ಧೃತಿಪೂರ್ಣ, ಬಲಿಷ್ಠನಾದ ಒಳ್ಳೆಯ ತರುಣ. ಒಳ್ಳೆಯವರಲ್ಲದವರು ಬಾಳನ್ನು ಸವಿಯಲಾರರು. ನಮ್ಮ ಬಿಲ್ಲ, ರಂಗರಂಥ ಅಪರಾಧಿಗಳು ನಿಜವಾಗಿ ಬಾಳನ್ನು ಅನುಭವಿಸುವರೆ? ಖಂಡಿತ ಇಲ್ಲ. ಅವರು ತೀರಾ ಕಚ್ಚಾ, ತೀರಾ ಹೀನರು, ಅವರಿಗೆ ಬಾಳಿನ ಅರ್ಥ, ಬಾಳಿನ ಆನಂದ ಏನೂ ತಿಳಿಯದು.

ಆದರೆ ಕೇವಲ ಒಳ್ಳೆಯತನ ಸಾಲದು. ಒಳ್ಳೆಯ ಶಿಕ್ಷಣವನ್ನು ಹೊಂದಿರಬೇಕು, ಅಧ್ಯಾಯಕಃ ; ಮನುಷ್ಯ ಜೀವನವನ್ನು ಅನುಭವಿಸಲು, ಅರಿವಿನ ಆಗರವಿರಬೇಕು. ಪ್ರಾಣಿಗೆ ಇರುವುದು ದೈಹಿಕ ಸಂತೋಷ ಮಾತ್ರ ; ಮನುಷ್ಯನಿಗೊ ದೈಹಿಕ ಮತ್ತು ಮಾನಸಿಕ ಸಂತೋಷ ಉಂಟು ; ಮಾನಸಿಕ ಸಂತೋಷ ದೈಹಿಕ ಸಂತೋಷಕ್ಕಿಂತ ಗಾಢವಾದುದು ; ಆದರೆ ಸುಶಿಕ್ಷಿನಾದ ಒಳ್ಳೆಯ ಯುವಕನೂ ಸಾಲದು ಎನ್ನುತ್ತದೆ ಉಪನಿಷತ್ತು. ಮೂರು ಅದ್ಭುತ ಶಬ್ದಗಳ ಮೂಲಕ ಇನ್ನೂ ಮೂರು ಅರ್ಹತೆಗಳನ್ನು ಸೇರಿಸುತ್ತದೆ — **ಆಶಿಷ್ಠೋ, ಧೃಢಿಷ್ಠೋ ಬಲಿಷ್ಠಃ** ; ಸುಶಿಕ್ಷಿತನಾದ ಒಳ್ಳೆಯ ಯುವಕ ಆಶಿಷ್ಠನೂ ಆಗಿರಬೇಕು — ಎಚ್ಚರವಾಗಿರುವ ಮನಸ್ಸುಳ್ಳವನಾಗಿರಬೇಕು, ಆಶಾಭರಿತನಾಗಿರಬೇಕು. ಆರೋಗ್ಯವಂತ ಯುವ ಜನ ಆಶಾಭರಿತರು ; ಅವರನ್ನು ಭವಿಷ್ಯ ಕೈಬೀಸಿ ಕರೆಯುತ್ತಿರುತ್ತದೆ ಬನ್ನಿ ಬನ್ನಿ, ಬನ್ನಿ ಎಂದು. ಸುಸ್ತಾದವರು, ಸಿನಿಕರಾದವರು, ಅರೆಸತ್ತವರು ಭವಿಷ್ಯದ ಈ ಕರೆಯನ್ನು ಕೇಳುವುದಿಲ್ಲ. ಈ ಮಾರಕ ಮನೋಭಾವಗಳಿಂದ ಮುಕ್ತನಾದ ಯುವಕ ಆಶಾಪೂರ್ಣವಾಗಿ ಭವಿಷ್ಯದತ್ತ ನೋಡುತ್ತಾನೆ. ಆತ್ಮಶ್ರದ್ಧೆಯ ಮೂಲಕ ಹುರುಪುಗೊಂಡ ಮನಸ್ಸಿನಿಂದ ಹಾದಿಯಲ್ಲಿನ ಸವಾಲುಗಳನ್ನೂ ಕಷ್ಟಗಳನ್ನೂ ದಾಟುತ್ತಾನೆ. ಮುಂದಿನ ಅರ್ಹತೆ ದೃಢಿಷ್ಠಃ, ಮನಶ್ಶಕ್ತಿ ಮತ್ತು ದೃಢ ಸಂಕಲ್ಪ, ಅನಂತರ ಮೂರನೆಯ ಅರ್ಹತೆ – ಬಲಿಷ್ಠಃ, ಮಾಂಸದಲ್ಲಿ , ನರಗಳಲ್ಲಿ ದಾರ್ಢ್ಯ, ಬಲ.

ಯುವಕನನ್ನು ಮಾನವ ಆನಂದದ ಘಟಕವಾಗಿಸಲು ಈ ಐದು ಗುಣಗಳೂ ಸಾಲವು ಎಂದು ಭಾವಿಸುತ್ತದೆ ಉಪನಿಷತ್ತು. ಇನ್ನೂ ಒಂದನ್ನು ಸೇರಿಸುತ್ತದೆ. ನಾವು ಪ್ರಾಚೀನ ಋಷಿಗಳ ಗುಣಾತ್ಮಕ ಮನಸ್ಸನ್ನು ಕಾಣುವುದು ಇಲ್ಲೇ ; ತಸ್ಯೇಯಂ ಪೃಥ್ವೀ ಸರ್ವಾ ವಿತ್ತಸ್ಯ ಪೂರ್ಣಾ ಸ್ಯಾತ್ – 'ಭೌತ ಜಗತ್ತಿನ ಎಲ್ಲ ಸಂಪತ್ತೂ ಅವನ ಅಧೀನದಲ್ಲಿರಲಿ.' ಉಪನಿಷತ್ತು ಭೌತಿಕ ಸಂಪತ್ತನ್ನು ಕೀಳಾಗಿ ಕಾಣುವುದಿಲ್ಲ. ಮಾನವನ ಆನಂದದ ಒಂದು ಮುಖ್ಯ ಪರಿಕರ ಅದು ಎಂದು ಭಾವಿಸುತ್ತದೆ. ಈಗ ನಮಗೆ ಒಬ್ಬ ತರುಣ ಸಿಕ್ಕಿದ — ಒಳ್ಳೆಯ ಪ್ರಕೃತಿ, ಒಳ್ಳೆಯ ಶಿಕ್ಷಣವುಳ್ಳ, ಆಶಾಭರಿತ, ಬಲವಾದ ಮನಸ್ಸು, ಸಂಕಲ್ಪಶಕ್ತಿ ಉಳ್ಳವ, ದೈಹಿಕವಾಗಿ ಶಕ್ತಿಯುತ, ಸದೃಢ ಮತ್ತು ಸಂಪನ್ಮೂಲ ಪಡೆದವ. **ಸ ಏಕೋ ಮಾನುಷಾ ಆನಂದಃ** – 'ಅದೇ ಮಾನವ ಆನಂದದ ಘಟಕ' ಎಂದು ಹೇಳಿ ಮುಗಿಸುತ್ತದೆ ಉಪನಿಷತ್ತು.

ಇದು ಆನಂದ ಜಿಜ್ಞಾಸೆಯ ಆರಂಭ ಮಾತ್ರ. ಮೊದಲು ಘಟಕವನ್ನು ಗೊತ್ತುಮಾಡಬೇಕು, ಆಮೇಲೆ ಆ ಘಟಕದ ಗುಣ ಲಬ್ಧಗಳನ್ನು ಕಂಡುಹಿಡಿದು ಗೊತ್ತುಮಾಡಬೇಕು. ಇಲ್ಲಿ ಉಪನಿಷತ್ತು, ಈ ಮಾನವಾನಂದ ಘಟಕದ ಗುಣಲಬ್ಧಗಳನ್ನು ದೇವತೆಗಳ ಮತ್ತು ಇತರ ಉನ್ನತ ದಿವ್ಯ ವ್ಯಕ್ತಿಗಳ ಹಾಗೂ ಸ್ಥಿತಿಗಳ ಆನಂದದಲ್ಲಿ ನಮಗೆ ನೀಡುತ್ತದೆ (ಆದರೆ ಇದರ ಪ್ರತಿಯೊಂದು ಘಟ್ಟದಲ್ಲೂ ಮತ್ತು ಆನಂದದ ಪ್ರತಿಯೊಂದು ಇತರ ಉನ್ನತೋನ್ನತ ಸ್ತರದ ಇದಿರಿನಲ್ಲೂ ಉಪನಿಷತ್ತು ಇದೇ ಮಾನವ ಶರೀರದಲ್ಲಿಯೆ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡಿರುವ ಮನುಷ್ಯನ ಆನಂದವನ್ನು ಮುಂದೆ ಇಡುತ್ತದೆ — ಶ್ರೋತ್ರಿಯಸ್ಯ ಚ ಅಕಾಮಹತಸ್ಯ.) 'ನಿಜವಾದ ಧರ್ಮದ ಭಾವನೆಯನ್ನು ಅರಿತವನು ಮತ್ತು ಇಂದ್ರಿಯ ದಾಹಕ್ಕೆ ಒಳಗಾಗದವನು.' (ಆತ್ಮದಲ್ಲಿ ಅನಂತವೂ ಅವಿನಾಶಿಯೂ ಆದ ಆಯಾಮವನ್ನು ಸಾಕ್ಷಾತ್ಕರಿಸಿ ಕೊಂಡಿರುವ ಸಲುವಾಗಿ.)

ಧರ್ಮವಿಜ್ಞಾನ ಮಾನವನ ಬೆಳವಣಿಗೆ, ಅಭಿವೃದ್ಧಿ ಮತ್ತು ಸಿದ್ಧಿಗಳನ್ನು ಒತ್ತಿ ಹೇಳುತ್ತದೆ. ಜೀವನ, ಕಾರ್ಯ ಹಾಗೂ ಅಂತರ ಮಾನವೀಯ ಸಂಬಂಧಗಳ ಹಿನ್ನೆಲೆಯಲ್ಲಿಯೇ ಆದ ಆಧ್ಯಾತ್ಮಿಕ ಸಾಕ್ಷಾತ್ಕಾರ ಮತ್ತು ಪ್ರತಿಯೊಬ್ಬ ಜೀವಿಯಲ್ಲೂ ಅಡಗಿರುವ ಅದೇ ಆತ್ಮದ ಸಾಕ್ಷಾತ್ಕಾರಗಳ ಫಲವೇ ಆ ಸಿದ್ಧಿ, ಆ ಕೃತಕೃತ್ಯತೆ. ಆತ್ಮಕಾಮಃ, ಆಪ್ತಕಾಮಃ, ಅಕಾಮಃ — 'ಆತ್ಮವನ್ನು ಬಯಸುವುದು, ಆತ್ಮದಲ್ಲಿ ಕೃತಕೃತ್ಯನಾಗುವುದು, ಕಾಮರಹಿತನಾಗುವುದು.' ಬೃಹದಾರಣ್ಯಕ ಉಪನಿಷತ್ತು ಹೀಗೆ ಹೇಳುತ್ತದೆ. ಈ ಸಾಕ್ಷಾತ್ಕಾರದಿಂದ ಮೂಡಿ ಬಂದ ಆನಂದ ಯೌವನದ ಆನಂದಕ್ಕೆ ಸಮ, ಪ್ರತಿಯೊಂದು ಉನ್ನತ ಜೀವಿಯ ಆನಂದಕ್ಕೆ ಸಮ ಎನ್ನುತ್ತದೆ ಉಪನಿಷತ್ತು. ಈ ರೀತಿ ಉಪನಿಷತ್ತು ಒಬ್ಬನ ಬಾಹ್ಯ ಅಂತಸ್ತಿನ ನಾನಾ ಬೆಳವಣಿಗೆಗಳನ್ನು ಆಧರಿಸಿ, ನಾನಾ ಆನಂದ ಶ್ರೇಣಿಗಳನ್ನು ನೀಡುತ್ತದೆ. ಆ ಆನಂದ, ಶ್ರೇಣಿಗಳನ್ನೇ ಅರಿಯದ ಅಮಿತ ಆತ್ಮಾನಂದಕ್ಕಿಂತ ಹೆಚ್ಚಿನದಲ್ಲ; ಅದು ಹೊರಗಿನಿಂದ ಬರುವುದಲ್ಲ. ಆದರೆ ಎಲ್ಲ ಬಾಹ್ಯ ಸೆಳೆತಗಳನ್ನೂ ಗೆಲ್ಲುವುದರಿಂದ ಬರುವುದು, ಸ್ವಸ್ವಭಾವವನ್ನೇ ಅನಂತವಾದ ಅವಿನಾಶಿಯಾದ ಆತ್ಮ ಎಂದು ಸಾಕ್ಷಾತ್ಕರಿಸಿಕೊಳ್ಳುವುದರಿಂದ ಬರುವುದು.